ಓ ಅಲ್ಲಿಗಾ? ನಡೀಬೇಕು ಎರಡು ಮೈಲಿ..

ಓ, ನಡೀತೀನಿ, ಅದೇನು ಮಹಾ? ಎನ್ನುವಂತೆ ಪ್ರಾಯ ತುಂಬಿ ತುಳುಕಾಡುವ ಹುಡುಗ ಮುಖದಲ್ಲೇ ವಿಶ್ವಾಸ ಪ್ರದರ್ಶಿಸಿದ.

ನಾನೂ ಅದೇ ಊರಿನೋನು. ಬಾ ನಂಜೊತೆ, ಮನೆ ತೋರಿಸ್ತೀನಿ..

ಅನಂತಪದ್ಮನಾಭ ಅಪರಿಚಿತ ವ್ಯಕ್ತಿಯ ಜೊತೆ ಅವನ ಬೀಸು ನಡಿಗೆಗೆ ಸರಿಸಾಟಿಯಾಗಿ ಹೆಜ್ಜೆ ಹಾಕತೊಡಗಿದ. ಬೆಳಗಿನ ಎಳೆ ಬಿಸಿಲು ನಿಧಾನವಾಗಿ ಚುರುಗುಟ್ಟುವ ಹಂತಕ್ಕೆ ತಲುಪತೊಡಗಿದ್ದರೂ ಗಾಡಿ ದಾರಿಯ ಇಕ್ಕೆಲಗಳಲ್ಲಿದ್ದ ಮರಗಳ ತಣ್ಣೆಳಲು ಸೂರ್ಯಕಿರಣಗಳ ತಾಪಕ್ಕೆ ಕಡಿವಾಣ ಹಾಕಿತ್ತು. ಗಾಳಿಯ ಸುಳಿವಿಲ್ಲದೆ ಚಿತ್ರವತ್ತಾಗಿ ಕಾಣುತ್ತಿದ್ದ ವೃಕ್ಷ ಸಂಕುಲಗಳು. ಅಲ್ಲೊಂದಿಲ್ಲೊಂದು ಹಕ್ಕಿ ಚಿಲಿಪಿಲಿಸಿ ಮೌನದ ಏಕತಾನತೆ ಕದಡುವುದನ್ನು ಬಿಟ್ಟರೆ ಬೇರೆ ಸದ್ದಿಲ್ಲ. ಯಾವೂರಾಯ್ತೋ? ಜೊತೆಯಲ್ಲಿದ್ದವರು ಪೀಠಿಕೆ ಹಾಕುತ್ತಿದ್ದಂತೆ ಅಮ್ಮ ಪದೇಪದೇ ಹೇಳಿ ಕಳಿಸಿದ್ದ ಎಚ್ಚರಿಕೆಯ ಮಾತು ನೆನಪಿಗೆ ಬಂತು ಪದ್ಮನಾಭನಿಗೆ. ಯಾರ ಹತ್ರಾನೂ ಪುರಾಣ ಬಿಚ್ಚೋಕೆ ಹೋಗ್ಬೇಡ. ನೀನಾಯ್ತು, ನಿನ್ನ ಕೆಲಸ ಆಯ್ತು ಅನ್ನೋ ಹಂಗೆ ಹೇಳಿದಷ್ಟು ಕೆಲಸ ಮಾಡ್ಕಂಡು ಬರ್ಬೇಕು. ಊರು ಅಂದ್ಮೇಲೆ ನಾನಾ ನಮೂನಿ ಜನ ಇರ್ತಾರೆ. ಹತ್ತು ಪ್ರಶ್ನೆ ಕೇಳಿ ಬಾಯಿ ಬಿಡಿಸೋಕೆ ನೋಡ್ತಾರೆ. ಇದೊಂದು ಮದುವೆ ಸುಸೂತ್ರವಾಗಿ ಆಗೋವರೆಗೆ ನಾವು ನಮ್ಮ ಎಚ್ಚರಿಕೇಲಿ ಇರ್ಬೇಕು.. ಅಮ್ಮನಿಗೆ ಏನೇನೋ ಹೆದರಿಕೆಗಳು, ಹಳವಂಡಗಳು. ಯಾರೋ ಕಿಡಿಗೇಡಿಗಳು ಆಗಬೇಕಾದ ಕೆಲಸಕ್ಕೆ ಕಡ್ಡಿ ಹಚ್ಚಿಬಿಟ್ಟರೆ ಎನ್ನುವುದು ಅವಳ ಭಯ. ಯಾರನ್ನೂ ನಂಬೋ ಹಂಗಿಲ್ಲ ಎನ್ನುವ ಸಂಶಯ. ಅದನ್ನೇ ಗಮನದಲ್ಲಿಟ್ಟುಕೊಂಡು ಪದ್ಮನಾಭ ಆ ಕ್ಷಣಕ್ಕೆ ಬಾಯಿಗೆ ಬಂದ ಒಂದೂರಿನ ಹೆಸರು ಹೇಳಿದ.

ಇವತ್ತೇ ಹೊಸ್ತಾಗಿ ಬರ್ತಿರೋದಾ? ರಾಮಣ್ಣನ ಹತ್ರ ಏನಾರೂ ಕೆಲಸ ಇತ್ತಾ?

ಅವರ ನೆಂಟರ ಪೈಕೀದು ಒಂದು ಮದುವೆ ಪತ್ರಿಕೆ ತಲುಪಿಸ್ಬೇಕಿತ್ತು. ಅಕ್ಷತೆ ಕೊಟ್ಟು ಕರೆದು ಬಾ ಅಂತ ನನ್ನ ಕಳ್ಸಿದಾರೆ.. ಪೂರಾ ಸತ್ಯವೂ ಅಲ್ಲದ, ಸುಳ್ಳೂ ಅಲ್ಲದ ಒಂದು ಸ್ವಪ್ನನೆ.

ಓ, ಹಂಗಾ? ಎಂದ ಅಪರಿಚಿತ. ಪುಣ್ಯಾತ್ಮ ಇನ್ನೇನೂ ಮಾತಾಡದಿರಲಿ ಎಂದು ಪದ್ಮನಾಭ ಹಾರೈಸಿದ್ದು ಆತನ ಕಿವಿಗೂ ತಟ್ಟಿತು ಅನ್ನುವಂತೆ ಮುಂದೆ ಆ ಮನುಷ್ಯ ಪದ್ಮನಾಭನನ್ನು ಹೆಚ್ಚು ಕೆಣಕಲು ಹೋಗಲಿಲ್ಲ.

ಊರು ಹತ್ತಿರ ಬಂತು ಎನ್ನುವುದಕ್ಕೆ ಸಾಕ್ಷಿಯಾಗಿ ದಾರಿ ಪಕ್ಕದ ತಗ್ಗಿನಲ್ಲಿ ಬೇಲಿಯ ಕಣ್ಗಾವಲಿನಲ್ಲಿದ್ದ ಅಡಿಕೆ ತೋಟಗಳು ಸ್ವಾಗತ ಕೋರಿದುವು. ಪದ್ಮನಾಭನ ಹೊಟ್ಟೆ ಆಗಲೇ ಚುರುಗುಟ್ಟತೊಡಗಿತ್ತು. ಬೆಳಿಗ್ಗೆ ಎಂಟು ಗಂಟೆಯ ಹೊತ್ತಿಗೆ ಅವನು ಊರು ಬಿಟ್ಟಿದ್ದ. ಇಲ್ಲಿನ ಹಾಗೆ ಅವನ ಊರಲ್ಲೂ ಬಸ್ಸು ಬರುವ ಜಾಗಕ್ಕೆ ನಡೆಯಬೇಕು ಒಂದೂವರೆ ಮೈಲಿ. ಮನೆ ಹಿಂದಿನ ಸಣ್ಣದೊಂದು ಗುಡ್ಡ ಹತ್ತಿ, ಕಾನಿನ ನಡುವಿದ್ದ ಕಾಲುದಾರಿ ಹಾಯ್ದು, ತಗ್ಗಿಗೆ ಇಳಿದು, ಟಾರು ರಸ್ತೆ ಸೇರಿ, ಬಸ್ಸಿಗೆ ಕಾದು ನಿಲ್ಲಬೇಕು. ಅಷ್ಟು ದೂರದಲ್ಲಿ ಬಸ್ಸು ಬರುತ್ತಿದ್ದಂತೆ ಕೈ ಅಡ್ಡ ಹಿಡಿದು ಬಸ್ಸು ಹತ್ತಿಕೊಳ್ಳಬೇಕು. ಹೈಸ್ಕೂಲಿಗೆ ಸೇರಿದಾಗಿನಿಂದ ಈ ಥರದ ಪ್ರಯಾಣ ಪದ್ಮನಾಭನಿಗೆ ಅಭ್ಯಾಸವಾಗಿಬಿಟ್ಟಿದೆ. ಮಧ್ಯಾಹ್ನದ ಬಿಡುವಿನಲ್ಲಿ ಹಸಿವು ತಣಿಸಿಕೊಳ್ಳಲು ಅಮ್ಮ ಕಟ್ಟಿಕೊಟ್ಟ ಬುತ್ತಿ. ಚಳಿ ಮಳೆಗಾಲಗಳಲ್ಲಿ ತಣ್ಣಗೆ ಕೊರೆಯುತ್ತಾ, ಬೇಸಿಗೆಯಲ್ಲಿ ಹಳಸಲು ವಾಸನೆಯ ಹಂತ ತಲುಪುತ್ತಾ, ಟಿಫನ್ ಕ್ಯಾರಿಯರ್‌ನಲ್ಲಿದ್ದ ತಿಂಡಿಯೋ, ಮೊಸರನ್ನವೋ, ಅರ್ಧಕ್ಕರ್ಧ ವಾಪಸು ಬರುತ್ತಿತ್ತು. ಅಮ್ಮನಿಗೆ ಸಿಟ್ಟು. ನೀನೇನು ಅಮೃತ ಕುಡ್ಕಂಡು ಹುಟ್ಟಿದೀಯನೋ? ಉಪಾಸ ಮಾಡಿ ಖಾಯಿಲೆ ಬಿದ್ರೆ ಎಂತಾಗುತ್ತೇಂತ ಗೊತ್ತಾ? ಕನ್ನಡೀಲಿ ಮಕ ನೋಡ್ಕಂಡಿದೀಯಾ? ವಾಟೆ ಗಳ ಆಗಿದ್ದಿ..

ನೀನು ಕಟ್ಟಿ ಕೊಡೋದನ್ನ ಒಂದಿನ ನೀನೇ ತಿಂದು ನೋಡು, ಗೊತ್ತಾಗುತ್ತೆ..

ಹೇಳಿದ್ದಕ್ಕೊಂದು ಪ್ರತಿ ಹೇಳೋಕೆ ಲಾಯ್ಕು ಬರುತ್ತೆ ನಿಂಗೆ. ಅಷ್ಟಿದ್ದೋನು ಓದು ಕೈದು ಮಾಡಿ ಮನೇಲಿದ್ಬಿಡು. ಓದು ಅಂತ ಯಾರೇನು ನಿಂಗೆ ಗುದ್ದೋಕೆ ಬರ್ತಾರಾ?

ಪದ್ಮನಾಭ ಎಸ್ಸೆಸ್ಸೆಲ್ಸಿ ಮುಗಿಸುತ್ತಿದ್ದಂತೆ ಅಮ್ಮನ ಇಂತಾ ಮಾತುಗಳು ಹೆಚ್ಚುಹೆಚ್ಚಾಗುತ್ತಿದ್ದುದನ್ನು ಗಮನಿಸದಷ್ಟು ದಡ್ಡ ಅಲ್ಲ ಪದ್ಮನಾಭ. ಹೀಗೆ ಓದು ಬಿಟ್ಟು ಮನೆಯಲ್ಲಿ ಕೂತರೆ ಯಾವುದಕ್ಕೂ ಅರೆಯಾಗದಷ್ಟು ತೋಟ, ಗದ್ದೆ ಇದ್ದೇ ಇತ್ತು. ಅಮ್ಮನಿಗೆ ಅದರದ್ದೇ ಬಲ. ಮಗಳು ಪೂರ್ಣಿಮನಿಗಿಂತ ಮಗ ಪದ್ಮನಾಭನ ಮೇಲೆ ಅವಳಿಗೆ ಒಂದು ಗುಲಗುಂಜಿ ಪ್ರೀತಿ ಜಾಸ್ತಿ. ಎಷ್ಟಾದರೂ ಗಂಡು ಹುಡುಗ. ಕೊನೆಗಾಲದಲ್ಲಿ ನೋಡಿಕೊಳ್ಳಬೇಕಾದ ಜವಾಬ್ದಾರಿ ಹೊರಬೇಕಾದವನು. ಮಗಳು ಇವತ್ತಲ್ಲಾ ನಾಳೆ ಮದುವೆಯಾಗಿ ಹೊರಟು ಹೋಗುವಂತವಳು. ಏನಿದ್ದರೂ ಮಗನ ಸಹವಾಸವೇ ಖಾಯಂ. ಓದಿನ ನೆಪದಲ್ಲಿ ನಾಳೆ ಅವನು ಊರು ಬಿಟ್ಟ ಅಂದರೆ ಮತ್ತೆ ಹಳ್ಳಿಯ ಕಡೆ ಮಕ ಹಾಕುತ್ತಾನೆ ಅನ್ನುವುದು ನಂಬುವಂತಾದ್ದಲ್ಲ. ಯಾವುದೋ ಕೆಲಸ ಹಿಡಿದು ಪೇಟೆ ಸೇರಿಕೊಂಡರೆ ಇಲ್ಲಿನ ಆಸ್ತಿಯ ಗತಿ ಗೋ..ವಿಂ..ದಾ. ಅದೆಷ್ಟೋ ಜನ ಮಾಡುವಂತೆ ಇದ್ದುಬಿದ್ದಿದ್ದನ್ನು ಮಾರಿ ಹಾಕಿ ಪೇಟೆ ಸೇರಿಕೊಳ್ಳಬೇಕಾಗಿದ್ದು ಅನಿವಾರ್ಯ. ಅದ್ಯಾಕೋ ಅವನ ಅಮ್ಮನಿಗೆ ಈ ವಿಚಾರ ಪಥ್ಯವಾಗುತ್ತಿರಲಿಲ್ಲ. ಹಳ್ಳಿ ಊರಲ್ಲಿ ಹುಟ್ಟಿ ಬೆಳೆದು ಅಲ್ಲೇ ಕಾಲ ಹಾಕಿದವಳಿಗೆ ಗಿಜಿಬಿಜಿ ಜನಸಂದಣಿಯ ಪಟ್ಟಣದ ಬದುಕು ಅಂದರೆ ನರಕ ಎನ್ನುವ ಭಾವನೆ. ಎಷ್ಟೇ ಕಷ್ಟ ಆಗಲಿ, ಆಳುಕಾಳುಗಳ ಕೊರತೆ ಕಾಡಲಿ, ಕೆಂಪು ಸಿಮೆಂಟಿನ ತಣ್ಣನೆಯ ನೆಲದ ತನ್ನ ಹಳ್ಳಿಮನೆ ಅಂದರೆ ಅವಳಿಗೆ ಸ್ವರ್ಗ ಸಮಾನ. ಹುಷಾರು ತಪ್ಪಿಯೋ, ಮತ್ಯಾವುದಕ್ಕೋ ಅವಳನ್ನು ಪೇಟೆ ಊರಿಗೆ ಕರೆದುಕೊಂಡು ಹೋದರೆ ಜಾತ್ರೆಯಲ್ಲಿ ತಪ್ಪಿಸಿಕೊಂಡ ಮಗುವಿನಂತೆ ಕಂಗಾಲಾಗಿ ಬಿಡುತ್ತಾಳೆ. ತಾಲೂಕು ಕೇಂದ್ರವಾದ ಸಣ್ಣ ಊರಲ್ಲೇ ರಸ್ತೆ ದಾಟಬೇಕಾದರೆ ಹೆದರುತ್ತಾ, ಆ ಕಡೆ, ಈ ಕಡೆ ಬೆರಗುಗಣ್ಣು ಹಾಯಿಸುತ್ತಾ, ಮಗನ ಕೈ ಹಿಡಿದುಕೊಂಡು ಕಣ್ಣು ಮುಚ್ಚಿ ಎಂಬಂತೆ ರಸ್ತೆ ದಾಟುತ್ತಿದ್ದವಳು ದೊಡ್ಡ ದೊಡ್ಡ ಪಟ್ಟಣಗಳಲ್ಲಿನ ವಾಹನಗಳ ಭರಾಟೆ ನೋಡಿದರೆ ಹೇಗೆ ನಡೆದುಕೊಳ್ಳಬಹುದು ಎಂದು ಚುಡಾವಣೆ ಮಾತಾಡುತ್ತಾನೆ ಪದ್ಮನಾಭ. ಅಸಲಿಗೆ ಅವನೂ ಕೂಡಾ ದೊಡ್ಡ ಪಟ್ಟಣಗಳನ್ನು ನೋಡಿದವನೇನಲ್ಲ. ಲಾರಿ, ಬಸ್ಸು ಎಂದರೆ ಯಮನ ವಾಹನ ಎಂದು ಸಾರಾಸಗಟಾಗಿ ನಿರ್ಧರಿಸಿ ಬಿಟ್ಟಿರುವ ಅಮ್ಮನ ವಿಚಾರಧಾರೆಯ ಕುರಿತು ಅವನಿಗೆ ನಗೆ. ನೀನೊಬ್ಳು ಎನ್ನುತ್ತಾ ಒಂದೇ ಪದದಲ್ಲಿ ಅವಳ ಅಮಾಯಕತೆಯನ್ನು ಟೀಕಿಸುತ್ತಾನೆ. ಇಂತಾ ಹೆದರುಪುಕ್ಕಲಿ ಅಮ್ಮ ಇವತ್ತು ಅವನೊಬ್ಬನನ್ನೇ ಹೊಸ ಜಾಗಕ್ಕೆ ಕಳಿಸಿ ಕೊಡಬೇಕಾದಾಗ ಅದೆಷ್ಟು ಬುದ್ಧಿಮಾತು ಹೇಳಿ ಕಳಿಸಿದ್ದಾಳೋ? ಏನು ಮಾತಾಡಬೇಕು, ಎಷ್ಟು ಮಾತಾಡಬೇಕು, ಪ್ರತಿಯೊಂದರ ಕುರಿತೂ ಪಾಠ. ಕೇಳಿ ಕೇಳಿ ಕಿವಿ ತೂತುಬಿದ್ದು ಹೋಗಿತ್ತು ಪದ್ಮನಾಭನಿಗೆ. ಅಲ್ವೇ ಪುಣ್ಯಾತ್ಗಿತ್ತಿ, ಅವರು ಏನು ಮಾತಾಡ್ತಾರೆ ಅನ್ನೋದನ್ನ ಕೇಳಿ ಅದಕ್ಕೆ ತಕ್ಕಂತೆ ನಾನು ಮಾತಾಡ್ಬೇಕಾ, ಅಥವಾ ಊದೋ ಶಂಖ ಊದಿ ಬಂದ್ಬಿಡ್ಬೇಕಾ? ನಿನ್ನ ಮಾತು ಕೇಳಿದ್ರೆ ಬೆಕ್ಕಿಗೆ ಜ್ವರ.. ಅಂದಿದ್ದ ಪದ್ಮನಾಭ. ಇದೀಗ ವಹಿಸಿಕೊಂಡು ಬಂದ ದೌತ್ಯವನ್ನು ಕಾರ್ಯರೂಪಕ್ಕಿಳಿಸುವ ಮುಹೂರ್ತ ಸನ್ನಿಹಿತವಾಗಿದೆ. ಯಾಕೋ ಪದ್ಮನಾಭನಿಗೆ ಎದೆ ಢವಢವಿಸಿತು. ಮುಖದ ಮೇಲೆ ಬೆವರು ಜಿನುಗಿದಂತೆನಿಸಿ ಜೇಬಿಗೆ ಕೈ ಹಾಕಿ ಕರವಸ್ತ್ರ ತೆಗೆದು ಅವನು ಮುಖ ಒತ್ತಿಕೊಂಡ, ಭ್ರೂ ಮಧ್ಯೆ ಅಮ್ಮ ಹಚ್ಚಿ ಕಳಿಸಿದ್ದ ದೇವರ ಪ್ರಸಾದದ ಕುಂಕುಮ ಓರೆಕೋರೆಯಾಗದಂತೆ ಜಾಗ್ರತೆ ವಹಿಸುತ್ತಾ. ದೇವರ ಮೇಲೆ ಭಾರ ಹಾಕಿ ಎನ್ನುವಂತೆ ಕಳಿಸಿಕೊಟ್ಟಿದ್ದಳು ಅಮ್ಮ, ವಹಿಸಿಕೊಂಡು ಬಂದಿದ್ದ ಮಗ..

ಅಕಾ, ಓ ಅಲ್ಲಿ ಕಾಣ್ತೆದೆಯಲ್ಲ, ಅದೇ ಮನೆ..

ಥ್ಯಾಂಕ್ಸ್ ಎನ್ನುವ ಕೃತಜ್ಞತಾಪೂರ್ವಕ ನುಡಿಯನ್ನು ಪ್ರಯತ್ನಪೂರ್ವಕವಾಗಿ ಆವಾಹಿಸಿಕೊಳ್ಳಬೇಕೇ ವಿನಾ ಹಳ್ಳಿ ಹೈದ ಪದ್ಮನಾಭನ ನಾಲಿಗೆಗೆ ಆ ಭಾಷೆ ಒಗ್ಗುವುದಿಲ್ಲ. ಉಪಕಾರ ಆಯ್ತು ಎನ್ನುವುದು ಅವನಿಗೆ ಸಲೀಸು.

ಉಪಕಾರ ಎಂತದು? ನಾನೂ ಹಿಂಗೇ ಮುಂದೆ ಹೋಗೋನಪ್ಪಾ.. ಜೊತೆಗಾರ ಕೈ ಬೀಸಿಕೊಂಡು ಹೊರಟು ಹೋದ ಮೇಲೆ ಅನಂತ ಪದ್ಮನಾಭ ಆತ ಸೂಚಿಸಿದ ಮನೆಯೆದುರು ಹೋಗಿ ನಿಂತ. ಮತ್ತೊಮ್ಮೆ ಜೇಬಿನ ಕರವಸ್ತ್ರ ಕೈಗೆ ಬಂತು. ಉರುಟುರುಟು ಬಿದಿರು ಗಳಗಳನ್ನು ಜೋಡಿಸಿದ್ದ ಉಣುಗೋಲಿನ ಗಳ ಸರಿಸುವಾಗ ಕೈಗಳಲ್ಲಿ ಸಣ್ಣಗೆ ನಡುಕ. ಗಂಟಲು ಒಣಗಿ ಗಾರುಗಾರಾದ ಅನುಭವ. ಹೊಟ್ಟೆ ಬಿರಿ ಮೊಸರವಲಕ್ಕಿ ತಿನ್ನಿಸಿ ಕಳಿಸಿದ ಅಮ್ಮ ಮುಂಜಾಗ್ರತಾ ಕ್ರಮವಾಗಿ ಚೀಲದೊಳಗೆ ಒಂದು ನೀರಿನ ಬಾಟಲಿ ಇಟ್ಟಿದ್ದಳು. ಇದೀಗ ಉದ್ದೇಶಿತ ಮನೆ ಬಾಗಿಲಲ್ಲಿ ಬಂದು ನಿಂತಿರುವಾಗ ಚೀಲದಲ್ಲಿರುವ ನೀರಿನ ಬಾಟಲಿ ತೆಗೆದು ನೀರು ಕುಡಿಯುವುದು ಅನುಚಿತ ಅನ್ನಿಸಿತು ಪದ್ಮನಾಭನಿಗೆ. ಎಂಜಲು ನುಂಗಿ ಒಣಗಿದ ಗಂಟಲನ್ನು ಒದ್ದೆ ಮಾಡಿಕೊಳ್ಳುತ್ತಾ